SI.A.No. 3-2022

RW-1,

ದಿನಾಂಕಃ 28-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. ಜೆ.ಪಿ. ವಕೀಲರಿಂದಃ

19) ಆಂತರಿಕ ವಿಚಾರಣೆಯಲ್ಲಿ ನನಗೆ ರಕ್ಷಣಾ ಸಹಾಯಕನಾಗಿ ಶ್ರೀ. ಅಜಯ್ ರವರನ್ನು ನಾನು ನೇಮಿಸಿಕೊಂಡಿರುತ್ತೇನೆ ಎಂದರೆ ಸರಿ . ಸ್ವಲ್ಪ ಸಮಯದ ನಂತರ ನಾನು ನನ್ನ ಸಹಕಾರ್ಮಿಕ ಆನಂದ್ ರವರನ್ನು ನನ್ನ ರಕ್ಷಣಾ ಸಹಾಯಕರಾಗಿ ನೇಮಿಸಿಕೊಂಡೆನು ಎಂದರೆ ಸರಿ . ನನ್ನ ವಿರುದ್ಧ ಆಡಳಿತ ವರ್ಗ ಸಲ್ಲಿಸಿದ್ದ ದೋಷಾರೋಪಣಾ ಪಟ್ಟಿಯಲ್ಲಿ ಒಟ್ಟು 14 ಆರೋಪಗಳು ಇದ್ದವು ಎಂದರೆ ಸರಿ .

20) ಆಂತರಿಕ ವಿಚಾರಣೆ ಸೆಪ್ಟೆಂಬರ್ -2021 ನೇ ಇಸವಿಯಲ್ಲಿ ಮುಗಿಯಿತು ಎಂದರೆ ನನಗೆ ನಿಖರವಾದ ದಿನಾಂಕ ನೆನಪಿಲ್ಲ. ಆಂತರಿಕ ವಿಚಾರಣೆಯ ಪ್ರತಿ ದಿನಾಂಕದ ನಡವಳಿಯ ಪ್ರತಿಯನ್ನು ನನಗೆ ವಿಚಾರಣಾಧಿಕಾರಿ ಪೂರೈಸುತ್ತಿದ್ದರು ಎಂದರೆ ಸರಿ . ನಡವಳಿ ಪ್ರತಿ ಪಡೆದುಕೊಂಡಿರುವುದರ ಬಗ್ಗೆ ನಾನು ಸ್ವೀಕೃತಿ ಸಹಿಯನ್ನು ಮಾಡುತ್ತಿದ್ದೆ ಎಂದರೆ ಸರಿ .

21) ಆಂತರಿಕ ವಿಚಾರಣೆಯಲ್ಲಿ ಆಡಳಿತ ವರ್ಗದ ಪರವಾಗಿ ಹದಿಮೂರು ಜನ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ . ಆಂತರಿಕ ವಿಚಾರಣೆ ಸಮಯದಲ್ಲಿ 107 ದಾಖಲೆಗಳನ್ನು ಮತ್ತು ಎರಡು ಸಿ ಡಿ ಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುತ್ತದೆ ಎಂದರೆ ಸರಿ . ಆಡಳಿತ ವರ್ಗದ ಪರ ಹನ್ನೆರಡು ಸಾಕ್ಷಿದಾರರನ್ನು ನಾನು ಪಾಟೀ ಸವಾಲು ಮಾಡಿರುತ್ತೇನೆ. ಪರಮೇಶ್ವರ್ ಎಂಬ ಸಾಕ್ಷಿಗೆ ಪಾಟೀ ಸವಾಲು ಮಾಡಿರುವುದಿಲ್ಲ, ಕಾರಣ ನನಗೆ ವಿಚಾರಣಾಧಿಕಾರಿ ಅವಕಾಶ ಕೊಡಲಿಲ್ಲ.

22) ಆಡಳಿತ ವರ್ಗದ ಪರ ಸಾಕ್ಷಿದಾರರಾದ ಪರಮೇಶ್ವರ್ ರವರನ್ನು ಪಾಟೀ ಸವಾಲು ಮಾಡಲು ನನಗೆ ಅವಕಾಶ ಕೊಟ್ಟರೂ ಸಹ ನಾನು ಸದರಿಯವರಿಗೆ ಪಾಟೀ ಸವಾಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪರಮೇಶ್ವರ್ ರವರು ಅರ್ಜಿದಾರರ ಸಂಸ್ಥೆಯಿಂದ ಕೆಲಸ ಬಿಟ್ಟು ಬೇರೆ ಕಡೆ ಹೋದ ನಂತರ , ಸದರಿಯವರನ್ನು ಪಾಟೀ ಸವಾಲು ಮಾಡುತ್ತೇನೆ ಎಂದು ವಿಚಾರಣಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ನನ್ನ ವಿರುದ್ಧ ಆಂತರಿಕ ವಿಚಾರಣೆ ಮುಗಿಯುವವರೆಗ ಪರಮೇಶ್ವರ್ ರವರು ಅರ್ಜಿದಾರರ ಸಂಸ್ಥೆಯಲ್ಲಿಯೇ ಕೆಲಸ ಮಾಡುತ್ತಿದ್ದರು ಎಂದು ಹೇಳಿದರು . ಪರಮೇಶ್ವರ್ ರವರನ್ನು ಪಾಟೀ ಸವಾಲು ಮಾಡಲು ಹಲವಾರು ಬಾರಿ ನನಗೆ ಕಾಲಾವಾಕಾಶ ನೀಡಲಾಗಿದ್ದರೂ ಸಹ ನಾನು ಪರಮೇಶ್ವರ್ ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ .

23) ಆಂತರಿಕ ವಿಚಾರಣೆಯಲ್ಲಿ ನನ್ನ ಪರವಾಗಿ ಒಟ್ಟು ಹದಿನಾಲ್ಕು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ . ಆಂತರಿಕ ವಿಚಾರಣೆಯಲ್ಲಿ ನನ್ನ ಪರವಾಗಿ ನಾನೇ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ಸಹ ಕಾರ್ಮಿಕನಾದ ಸಂತೋಷ್ ಕುಮಾರ್ ಬಿ. ಎನ್. ರವರನ್ನು ನನ್ನ ಪರವಾಗಿ ಸಾಕ್ಷಿ ನುಡಿಯಲು ಅನುಮತಿ ನೀಡಬೇಕೆಂದು ವಿಚಾರಣಾಧಿಕಾರಿಗೆ ಪ್ರಾರ್ಥಿಸಿದೆನು ಆದರೆ ವಿಚಾರಣಾಧಿಕಾರಿ ಅವಕಾಶ ಕೊಡಲಿಲ್ಲ ಎಂದು ಹೇಳಿದರು . ಮಂಡನಾಧಿಕಾರಿ ನನಗೆ ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸರಿ .

24) ನಿಶಾನೆ ಆರ್ –16 ರಂತೆ ನಾನು ವಿಚಾರಣಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ . ನಿಶಾನೆ ಆರ್–16 ರಲ್ಲಿ ನನ್ನ ಪರವಾಗಿ ಸಂತೋಷ್ ಕುಮಾರ್ ಬಿ. ಎನ್. ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಲು ಅವಕಾಶ ಕೋರಿರುತ್ತೇನೆ ಎಂದರೆ ಸರಿ . 17.06.2021 ರ ನಂತರ ಸಂತೋಷ್ ಕುಮಾರ್ ಬಿ. ಎನ್. ರವರನ್ನು ಸಾಕ್ಷಿಯನ್ನಾಗಿ ವಿಚಾರಣೆ ಮಾಡಲು ನನಗೆ ವಿಚಾರಣಾಧಿಕಾರಿ ಅವಕಾಶ ಕೊಟ್ಟರೂ ಸಹ ನಾನು ಸದರಿಯವರನ್ನು ಸಾಕ್ಷಿಯನ್ನಾಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

25) ವಿಚಾರಣಾಧಿಕಾರಿಗಳ ಮುಂದೆ ನಾನು ಹಾಜರು ಪಡಿಸಿದ ದಾಖಲೆಗಳನ್ನು ನಿಶಾನೆಯನ್ನಾಗಿ ಗುರುತಿಸಲು ವಿಚಾರಣಾಧಿಕಾರಿ ಅವಕಾಶ ಮಾಡಿಕೊಟ್ಟರು ಎಂದರೆ ಸರಿ . ಆಂತರಿಕ ವಿಚಾರಣೆಗೆ ಸಂಬಂಧ ಪಡದಂತಂಹ ದಾಖಲೆಗಳನ್ನು ವಿಚಾರಣಾಧಿಕಾರಿ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಆಂತರಿಕ ವಿಚಾರಣೆಗೆ ಸಂಬಂದ ಪಡದ ದಾಖಲೆಗಳನ್ನು ನಾನು ವಿಚಾರಣಾಧಿಕಾರಿಗಳ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದು ಹೇಳಿದರು .

26) ಆಂತರಿಕಾ ವಿಚಾರಣೆ ಸಮಯದಲ್ಲಿ ನನಗೆ ವಿಚಾರಣಾಧಿಕಾರಿ ಸಾಕಷ್ಟು ಅವಕಾಶಗಳನ್ನು ಕೊಟ್ಟರೂ , ಸದರಿ ಅವಕಾಶಗಳನ್ನು ನಾನು ಬಳಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ವಿಚಾರಣಾಧಿಕಾರಿ ನನಗೆ ಅವಕಾಶ ಕೊಟ್ಟಿರುವುದಿಲ್ಲ ಎಂದು ಹೇಳಿದರು . ಆಂತರಿಕ ವಿಚಾರಣೆ ನಡೆಯುವ ಸಮಯದಲ್ಲಿ ನಾನು ಅಮಾನತ್ತಿನಲ್ಲಿದ್ದೆ ಎಂದರೆ ಸರಿ . ಆಡಳಿತ ವರ್ಗದವರು ನನಗೆ ಅಮಾನತ್ತು ಅವಧಿಯ , ಅಮಾನತ್ತು ಭತ್ಯೆ ಪಾವತಿಸುತ್ತಿದ್ದರು ಎಂದರೆ ಸರಿ . ನನಗೆ ನನ್ನ ಮೂಲ ಸಂಬಳದ ಶೇಕಡಾ 90 ರಷ್ಟು ಹಣವನ್ನು ಅಮಾನತ್ತು ಭತ್ಯೆ ಯಾಗಿ ಪಾವತಿ ಮಾಡಲಾಗುತ್ತಿತ್ತು ಎಂದರೆ ಸರಿ . ನನಗೆ ಅಮಾನತ್ತು ಭತ್ಯೆ ಪಾವತಿಯಾಗುತ್ತಿದ್ದರಿಂದ ನಾನು ಆಂತರಿಕ ವಿಚಾರಣೆ ವಿಳಂಬವಾಗುವಂತೆ ನಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ನನ್ನ ವಿರುದ್ಧ ಆಂತರಿಕ ವಿಚಾರಣೆ ಸುಮಾರು ಒಂದು ವರ್ಷ ಒಂಭತ್ತು ತಿಂಗಳು ನಡೆಯಿತು ಎಂದರೆ ಸರಿ .

27) ಆಂತರಿಕಾ ವಿಚಾರಣೆಯ ಉದ್ದೇಶ ಈಡೇರಬಾರದೆಂಬ ಇರಾದೆಯಿಂದ ನಾನು ವಿಚಾರಣಾಧಿಕಾರಿಗಳ ಮುಂದೆ ಅನವಶ್ಯಕ ದಾಖಲೆಗಳನ್ನು ಹಾಜರು ಪಡಿಸಿದೆನು, ಆಂತರಿಕಾ ವಿಚಾರಣೆ ವಿಳಂಬವಾಗಲು ಕಾರಣಕರ್ತನಾದೆನು ಎಂದರೆ ಸರಿಯಲ್ಲ . ಆಂತರಿಕ ವಿಚಾರಣೆಯಲ್ಲಿ ನಾನು ಲಿಖಿತ ವಾದ ಸಲ್ಲಿಸಿರುತ್ತೇನೆ ಎಂದರೆ ಸರಿ . ಮಂಡನಾಧಿಕಾರಿಗಳೂ ಸಹ ವಿಚಾರಣಾಧಿಕಾರಿಗಳ ಮುಂದೆ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ .

28) ಪ್ರಶ್ನೆಃ ಆಂತರಿಕ ವಿಚಾರಣೆಯ ಪ್ರತಿ ದಿನಾಂಕದ ದಿನಚರಿಯ ಪ್ರತಿಯನ್ನು ಸಹಿ ಮಾಡಿ ಪಡೆದುಕೊಳ್ಳುವಾಗ , ವಿಚಾರಣಾಧಿಕಾರಿ ಅವಕಾಶ ನೀಡುತ್ತಿಲ್ಲವೆಂದು ಷರಾ ಬರೆಯಲು ನಿಮಗೆ ಯಾವುದೇ ತೊಂದರೆ ಇತ್ತೇ?

ಉತ್ತರಃ ಆಂತರಿಕ ವಿಚಾರಣೆಯ ಮೊದಲು ಕೆಲವು ದಿನಗಳ ದಿನಚರಿಯನ್ನು ನಾನು ಸಹಿ ಮಾಡಿ ಪಡೆದುಕೊಳ್ಳುತ್ತಿದ್ದೆ , ವಿಚಾರಣಾಧಿಕಾರಿ ಹಲವಾರು ಬಾರಿ ನನಗೆ ಬಲವಂತ ಮಾಡಿ ಸಹಿ ಮಾಡಿಸಿರುತ್ತಾರೆ . ನನಗೆ ಸೂಕ್ತ ಅವಕಾಶ ಕೊಡುತ್ತಿರಲಿಲ್ಲ , ನಾನು ಕಾನೂನು ಸಲಹೆಗಾರರನ್ನು ಸಂಪರ್ಕಿಸಿದಾಗ , ವಿಚಾರಣಾ ನಡವಳಿಯಲ್ಲಿ ಸಹಿ ಮಾಡಬಾರದು ಎಂದು ಸಲಹೆ ಕೊಡಲಾಯಿತು , ಕಾನುನು ಸಲಹೆಗಾರರು ಕೊಟ್ಟ ಸಲಹೆಯಂತೆ ನಂತರ ನಾನು ವಿಚಾರಣಾ ನಡವಳಿಗಳಲ್ಲಿ ಸಹಿ ಹಾಕಲಿಲ್ಲ. ಆದರೆ ಪ್ರತ್ಯೇಕ ಅರ್ಜಿಯನ್ನು ವಿಚಾರಣಾಧಿಕಾರಿಗೆ ಸಲ್ಲಿಸಿರುತ್ತೇನೆ.

29) ಆಂತರಿಕ ವಿಚಾರಣೆ ಸರಿಯಾಗಿ ನಡೆದಿಲ್ಲ ಎಂದು ಬಿಂಬಿಸುವ ಉದ್ದೇಶದಿಂದ ನಾನು ವಿಚಾರಣಾ ನಡವಳಿಗಳಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ .ಆಂತರಿಕ ವಿಚಾರಣೆಯ ಮುಂದಿನ ದಿನಾಂಕಗಳಲ್ಲಿ ನಾನು ನನಗೆ ಅವಕಾಶ ಕೊಟ್ಟಿರುವುದಿಲ್ಲ ಎಂದು ಸುಳ್ಳು ಅರ್ಜಿಗಳನ್ನು ವಿಚಾರಣಾಧಿಕಾರಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

30) ನಿಶಾನೆ ಆರ್-1 ರಿಂದ ಆರ್ -25 ದಾಖಲೆಗಳನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ . ಆಂತರಿಕ ವಿಚಾರಣೆಯ ವರದಿ ಆಡಳಿತ ವರ್ಗಕ್ಕೆ ಸಲ್ಲಿಕೆ ಯಾದ ನಂತರ , ಆಡಳಿತ ವರ್ಗ ನನಗೆ ಎರಡನೇ ಕಾರಣ ಕೇಳಿ ನೋಟೀಸ್ ನ್ನು ಕೊಟ್ಟಿರುತ್ತದೆ ಎಂದರೆ ಸರಿ . ನಾನು ಎರಡನೇ ಕಾರಣ ಕೇಳಿ ನೋಟೀಸ್ಸಿಗೆ ಉತ್ತರ ಸಲ್ಲಿಸಿರುತ್ತೇನೆ ಎಂದರೆ ಸರಿ . ನನ್ನನ್ನು ಕೆಲಸದಿಂದ ವಜಾ ಮಾಡಿರುವ ದಿನದಂದೇ ನನಗೆ ಒಂದು ತಿಂಗಳ ಸಂಬಳ ಅರ್ಜಿದಾರರು ಪಾವತಿ ಮಾಡಿರುತ್ತಾರೆ ಎಂದರೆ ಸರಿ .

31) ವಿಚಾರಣಾಧಿಕಾರಿ ಎಲ್ಲಾ ನಿಯಮಗಳನ್ನು ಪಾಲಿಸಿ ನೈಸರ್ಗಿಕ ನ್ಯಾಯತತ್ವಗಳನ್ನು ಅನುಸರಿಸಿ , ಆಂತರಿಕ ವಿಚಾರಣೆ ನಡೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಹೊರಿಸಲಾದ ಆರೋಪಗಳು ಸಾಬೀತಾಗಿದೆ ಎಂದು ವಿಚಾರಣಾಧಿಕಾರಿ ವರದಿಯಲ್ಲಿ ಹೇಳಿರುತ್ತಾರೆ ಎಂದರೆ ಸರಿ . ಆಂತರಿಕ ವಿಚಾರಣೆ ಕಾನೂನಬದ್ಧವಾಗಿ ನಡೆಸಲಾಗಿದೆ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

**(ನರಶಿಂಸಾ ಎಂ. ವಿ.),**
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.